3) **ರೇಷ್ಮೆ ವರದಾನ ಯೋಜನೆ**

ಅ) ಹಿಪ್ಪನೇರಳೆ ನಾಟಿ 0 475 10

4) **ತಾಲ್ಲೂಕು ಪಂಚಾಯತ್ ಯೋಜನೆ**

ಅ)ರೇಷ್ಮೆ ಹುಳು ಸಾಕಾಣಿಕೆ ಮನೆ 0 50 2

1377 ಶ್ರೀ ರಘುಪತಿ ಭಟ್ ಕೆ (ಉಡುಪಿ) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉಡುಪಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗದಲ್ಲಿ ಅಕ್ರಮವಾಗಿ ವಾಸ್ತವ್ಯವಿದ್ದು, ಹಕ್ಕುಪತ್ರ ಪಡೆಯಲು ಅರ್ಹರಿರುವ ಫಲಾನುಭವಿಗಳ ಸಂಖ್ಯೆ ಎಷ್ಟು (ಗ್ರಾಮ ಪಂಚಾಯತಿವಾರು ಮಾಹಿತಿ ನೀಡುವುದು),

ಆ) ಆ ಪೈಕಿ ಕಂದಾಯ ಅಧಿನಿಯಮ 94 ಸಿ ರಡಿ ಅರ್ಜಿ ನೀಡಿದವರ ಸಂಖ್ಯೆ ಎಷ್ಟು,

ಇ) ಈ ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲು ವಿಳಂಬವಾಗಲು ಕಾರಣವೇನು, ಇವರೆಲ್ಲರಿಗೆ ಗ್ರಾಮ ಪಂಚಾಯತದ ವಸತಿ ಸಮಿತಿ ಮೂಲಕ ಹಕ್ಕುಪತ್ರ ನೀಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು,

ಈ) ಕಂದಾಯ ಅಧಿನಿಯಮ 94 ಸಿ ಯಡಿಯಲ್ಲಿ ಇವರಿಗೆ ಹಕ್ಕುಪತ್ರ ನೀಡಲು ಅವಧಿ ವಿಸ್ತರಣೆಗೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಮಾನ್ಯ ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 911 (ಗ್ರಾಮ ಪಂಚಾಯತ್‌ವಾರು ಮಾಹಿತಿ ಲಗತ್ತಿಸಿದೆ)

ಆ) 2060

ಇ) ಒಟ್ಟು 911 ಅರ್ಜಿಗಳ ಪೈಕಿ ಈಗಾಗಲೇ 745 ಮಂದಿಗೆ ಹಕ್ಕುಪತ್ರ ನೀಡಲಾಗಿದೆ ಉಳಿದ 166 ಮಂದಿಗೆ ಸ್ಥಳಮೌಲ್ಯ ಪಾವತಿಸಲು ಬಾಕಿ ಇರುವುದರಿಂದ ಹಕ್ಕುಪತ್ರ ನೀಡಿಲ್ಲ ಇವರು ಸ್ಥಳ ಮೌಲ್ಯ ಪಾವತಿಸಿದ ಕೂಡಲೇ ಹಕ್ಕುಪತ್ರ ವಿತರಿಸಲು ಕ್ರಮ

ಕೈಗೊಳ್ಳಲಾಗುವುದು 94 ಸಿ ಅರ್ಜಿದಾರರಿಗೆ ವಸತಿ ಸಮಿತಿ ಮೂಲಕ ಹಕ್ಕುಪತ್ರ ನೀಡಲು ಅವಕಾಶವಿರುವುದಿಲ್ಲ

ಈ) ಈಗಾಗಲೇ 94 ಸಿ ರಡಿಯಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡುವ ಅವಧಿಯನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್ ಡಿ 59 ಎಲ್‌ಜಿಪಿ 2005, ದಿನಾಂಕ 20–03–2006ರಲ್ಲಿ ದಿನಾಂಕ 31–10–2007 ರವರೆಗೆ ವಿಸ್ತರಿಸಲಾಗಿದೆ

ಅನುಬಂಧ

ಉಡುಪಿ ಜಿಲ್ಲೆಯ ವಿಧಾನಸಭಾ ಕ್ಷೇತ್ರದ ಗ್ರಾಮ ಪಂಚಾಯತ್‌ವಾರು ಅರ್ಹ ಫಲಾನುಭವಿಗಳ ವಿವರ

ಕ್ರ ಸಂ	ಗ್ರಾಮದ ಹೆಸರು	ಹಕ್ಕುಪತ್ರ ನೀಡಲಾದ ಸಂಖ್ಯೆ
1	ಕೊಡವೂರು	
2	ಪುತ್ತೂರು	
3	ಹೆರ್ಗಾ	
4	ಶಿವಳ್ಳಿ	ನಗರ ಸಭೆ ವ್ಯಾಪ್ತಿ – 457
5	76 ಬೆಡಗಬೆಟ್ಟು	
6	ಮೂಡನಿಡಂಬೂರು	
7	ತೆಂಕನಿಡಿವೂರು	40
8	ಉಡ್ಯಾವರ	27
9	ಅತ್ರಾಡಿ	22
10	ಕಡೆಕಾರ್	10
11	ಅಂಬಾಲಪಾಡ್ಯ	18
12	ಮನಿಪೂರ	23

13	ಅಂಜಾರ್	63
14	80 ಬೆಡಗಬೆಟ್ಟು	78
15	ಕೊರಂಗರಪಾಡಿ	5
16	ಬೊಮ್ಮರಬೆಟ್ಟು	62
17	ಪೆರ್ನಾಂಕಿಲಾ	8
18	ಅಲಗೂರು	96
19	ಬಡಾನಿಡ್ಯೂರು	2
	ಒಟ್ಟು	**911**

1301 ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) – ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ನಿರ್ಮಿಸುವ ಉದ್ದೇಶ ಸರ್ಕಾರದ ಆಲೋಚನೆಯಲ್ಲಿದೆಯೇ,

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಅಪ್ಪಾಸಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಜವಳಿ ಸಚಿವರು)

ಅ) ಹೌದು ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇದೆ

ಆ) ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಪಟ್ಟಣದಲ್ಲಿ ಪವರ್‌ಲೂಮ್ಸ್ ಪಾರ್ಕ್‌ನ್ನು ಸ್ಥಾಪಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ

"ಶ್ರೀ ಗುಳೇದಗುಡ್ಡ ಪವರ್‌ಲೂಂ ಮಿನಿ ಪಾರ್ಕ್" ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಈ ಉದ್ದೇಶಿತ ಸಂಸ್ಥೆಯ ಮುಖಾಂತರ 75 ಜನ ಉದ್ದಿಮೆದಾರರು ಉದ್ದಿಮೆ ಸ್ಥಾಪಿಸಲು ಮುಂದೆ